**<u>ಅಸಲು ದಾವಾ ಸಂಖ್ಯೆ - 115/2023</u>** **ಡಿ.ಡಬ್ಲ್ಯೂ:-1**

ದಿನಾಂಕಃ **03-09-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :-ವಾದಿ ಪರ ವಕೀಲರಿಂದ :-</u>

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತು. ನನ್ನ ಅಜ್ಜನ ಹೆಸರು ಹನುಮಂತಪ್ಪ. ನನ್ನ ಅಜ್ಜಿಯ ಹೆಸರು ಸಣ್ಣರಂಗಮ್ಮ. ನಮ್ಮ ಅಜ್ಜನಿಗೆ 6 ಜನ ಮಕ್ಕಳು ಅಂದರೆ ಹನುಮತಂಪ್ಪ, ಸಿದ್ದಪ್ಪ, ಶೇಷಗಿರಿಯಪ್ಪ, ಹನುಮಂತಮ್ಮ, ಗಂಗಮ್ಮ ಮತ್ತು ನೀಲಮ್ಮ. ಶೇಷಗಿರಿಯಪ್ಪ ಈಗ ತೀರಿಕೊಂಡಿರುತ್ತಾರೆ. 1 ನೇ ಪ್ರತಿವಾದಿ ಶೇಷಗಿರಿಯಪ್ಪನ ಹೆಂಡತಿ. 1 ನೇ ಪ್ರತಿವಾದಿಗೆ 2 ರಿಂದ 5 ನೇ ಪ್ರತಿವಾದಿಗಳು ಮಕ್ಕಳು. ಪ್ರತಿವಾದಿ 6, 8 ಮತ್ತು 9 ರವರು ಈಗ ಮದುವೆಯಾಗಿ ಗಂಡನ ಮನೆಯಲ್ಲಿ ವಾಸವಾಗಿದ್ದಾರೆ. ಮುದ್ದಹನುಮಂತಪ್ಪ ಈಗ ತೀರಿಕೊಂಡಿರುತ್ತಾರೆ. ಮುದ್ದಹನುಮತಂಪ್ಪನಿಗೆ ಸುನಂದಮ್ಮ ಮತ್ತು ಸರೋಜಮ್ಮ ಇಬ್ಬರು ಹೆಂಡತಿಯರು. ಸಾಕ್ಷಿಗೆ ದಾವಾ ಐಟಂ ನಂ.1 ಮತ್ತು 2 ರ ಆಸ್ತಿಗಳು ಹನುಮಂತಪ್ಪನ ಮೂಲ ಆಸ್ತಿಗಳು ಎಂದರೆ ಸಾಕ್ಷಿಯು ಐಟಂ ನಂ.1 ರ ಆಸ್ತಿಯು ಹನುಮಂತಪ್ಪನ ಮೂಲ ಆಸ್ತಿ, ಐಟಂ ನಂ.2 ರ ಆಸ್ತಿಯು ನಮ್ಮ ತಂದೆ ತಾಯಿಗೆ ಸೇರಿದ ಆಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.2 ರ ಆಸ್ತಿಯನ್ನು ಹನುಮಂತಪ್ಪರವರು ಸಾಗುವಳಿ ಮಾಡಿಕೊಂಡು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಹನುಮಂತಪ್ಪರವರು ಮರಣಹೊಂದಿದ ನಂತರ ದಾವಾ ಆಸ್ತಿಗಳಲ್ಲಿ ಶೇಷಗಿರಿಯಪ್ಪ, ಮುದ್ದ ಹನುಮಂತಪ್ಪ ಮತ್ತು ಸಿದ್ದಪ್ಪರವರು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಐಟಂ ನಂ.1 ರ ಆಸ್ತಿಯಲ್ಲಿ ಮಾತ್ರ ಸ್ವಾಧೀನಾನುಭವದಲ್ಲಿದ್ದಾರೆ ಮತ್ತು ದಾವಾ ಐಟಂ ನಂ.2 ರ ಆಸ್ತಿಯಲ್ಲಿ ನನ್ನ ತಂದೆ ತಾಯಿಗಳು

ಸ್ವಾಧೀನಾನುಭವದಲ್ಲಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.2 ರ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಆಗಿದ್ದರೂ ಸಹ ಒಟ್ಟು ಕುಟುಂಬದ ಆಸ್ತಿ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.